ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-02-1992.

# *ಅನೇಕ ಜನ್ಮಗಳ ಪ್ರೇಮ ಸಂಪನ್ನ ಜೀವನವನ್ನು ರೂಪಿಸಿಕೊಳ್ಳುವ ಅಧಾರ ಈ ಜನ್ಮದ ಪರಮಾತ್ಮನ ಪ್ರೀತಿ*

(अनेक जन्म का प्यार सम्पन्न जीवन बनाने का आधार-इस जन्म का परमात्म-प्यार)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಫೆಬ್ರವರಿ 14ನೇ ದಿನಾಂಕದಂದು ವಿದೇಶಿಯರು ಪ್ರೇಮಿಗಳ ದಿನಾಚರಣೆಯನ್ನು ಆಚರಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಇಂದು ಓಂ ಶಾಂತಿ ಭವನವನ್ನು ಸುಂದರ ಸ್ವರ್ಗವಾಗಿ ಅಲಂಕರಣೆ ಮಾಡಿದ್ದಾರೆ. ಅಲಂಕರಿಸಿರುವ ವೇದಿಕೆಯ ಮೇಲೆ ಬಾಪ್‌ದಾದಾ ಬಂದಿದ್ದಾರೆ.**

ಇಂದು ಸರ್ವಶಕ್ತಿಗಳ ಸಾಗರ ಮತ್ತು ಸತ್ಯಸ್ನೇಹದ ಸಾಗರ ಹೃದಯರಾಮ ಬಾಪ್‌ದಾದಾ ತನ್ನ ಅತಿಸ್ನೇಹಿ ಸಮೀಪ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಈ ಆತ್ಮಿಕ ಸ್ನೇಹಮಿಲನ ಹಾಗೂ ಪ್ರೀತಿಯ ಮೇಳವು ವಿಚಿತ್ರ ಮಿಲನವಾಗಿದೆ. ಈ ಮಿಲನವು ಹೃದಯರಾಮ ತಂದೆ ಮತ್ತು ಸತ್ಯಹೃದಯೀ ಮಕ್ಕಳ ಮಿಲನವಾಗಿದೆ. ಈ ಮಿಲನವು ಸರ್ವಅನೇಕ ಪ್ರಕಾರದ ವ್ಯಾಕುಲತೆಗಳಿಂದ ದೂರ ಮಾಡುವಂತದ್ದಾಗಿದೆ. ಆತ್ಮಿಕ ನಶೆಯ ಸ್ಥಿತಿಯ ಅನುಭವ ಮಾಡಿಸುವಂತದ್ದಾಗಿದೆ. ಈ ಮಿಲನವು ಸಹಜವಾಗಿ ಹಳೆಯ ಜೀವನವನ್ನು ಪರಿವರ್ತನೆ ಮಾಡುವಂತದ್ದಾಗಿದೆ. ಈ ಮಿಲನವು ಸರ್ವಶ್ರೇಷ್ಠ ಪ್ರಾಪ್ತಿಗಳ ಅನುಭೂತಿಗಳಿಂದ ಸಂಪನ್ನ ಮಾಡುವಂತದ್ದಾಗಿದೆ. ಇಂತಹ ವಿಚಿತ್ರ ಪ್ರಿಯವಾದ ಮಿಲನಮೇಳದಲ್ಲಿ ತಾವೆಲ್ಲರೂ ಪದಮಾಪದಮ್ ಭಾಗ್ಯಶಾಲಿ ಆತ್ಮರು ಬಂದು ತಲುಪಿದ್ದೀರಿ. ಈ ಪರಮಾತ್ಮ ಮೇಳವು ಸರ್ವಪ್ರಾಪ್ತಿಗಳ ಮೇಳ, ಸರ್ವಸಂಬಂಧಗಳ ಅನುಭವದ ಮೇಳವಾಗಿದೆ. ಸರ್ವಖಜಾನೆಗಳಿಂದ ಸಂಪನ್ನರಾಗುವ ಮೇಳವಾಗಿದೆ. ಎಷ್ಟು ಪ್ರಿಯವಾಗಿದೆ! ಮತ್ತು ಈ ಅನುಭೂತಿಯನ್ನು ಅನುಭವ ಮಾಡುವವರು. ಪಾತ್ರರಾಗುವವರು. ತಾವು ಕೋಟಿಯಲ್ಲಿ ಕೆಲವರು ಕೆಲವರಲ್ಲಿಯೂ ಕೆಲವರು ಪರಮಾತ್ಮಪ್ರಿಯ ಆತ್ಮರಾಗಿದ್ದೀರಿ. ಕೋಟ್ಯಾಂತರ

ಆತ್ಮರು ಈ ಅನುಭೂತಿಯನ್ನು ಹುಡುಕುತ್ತಿದ್ದಾರೆ ಮತ್ತು ತಾವು ಮಿಲನವನ್ನಾಚರಿಸುತ್ತಿದ್ದೀರಿ ಮತ್ತು ಸದಾ ಪರಮಾತ್ಮ ಮಿಲನದ ಮೇಳದಲ್ಲಿಯೇ ಇರುತ್ತೀರಿ ಏಕೆಂದರೆ ತಮಗೆ ತಂದೆಯು ಪ್ರಿಯರಾಗಿದ್ದಾರೆ ಮತ್ತು ತಂದೆಗೆ ತಾವು ಪ್ರಿಯರಾಗಿದ್ದೀರಿ ಅಂದಮೇಲೆ ಪ್ರಿಯರಾದವರು ಎಲ್ಲಿರುತ್ತಾರೆ? ಸದಾ ಪ್ರೀತಿಯ ಮಿಲನದ ಮೇಳದಲ್ಲಿರುತ್ತಾರೆ ಅಂದಮೇಲೆ ಸದಾ ಮೇಳದಲ್ಲಿರುತ್ತೀರೋ ಅಥವಾ ದೂರವಿರುತ್ತೀರೋ? ತಂದೆ ಮತ್ತು ತಾವು ಜೊತೆಯಿರುತ್ತೀರಿ ಅಂದಮೇಲೆ ಏನಾಯಿತು? ಮಿಲನದ ಮೇಳವಾಯಿತಲ್ಲವೆ. ತಾವು ಎಲ್ಲಿರುತ್ತೀರಿ ಎಂದು ಯಾರಾದರೂ ಕೇಳಿದರೆ ನಶೆಯಿಂದ ಹೇಳುತ್ತೀರಿ- ನಾವು ಸದಾ ಪರಮಾತ್ಮನ ಮಿಲನದ ಮೇಳದಲ್ಲಿರುತ್ತೇವೆ ಎಂದು. ಇದನ್ನೇ ಪ್ರೀತಿಯೆಂದು ಹೇಳಲಾಗುತ್ತದೆ. ಸತ್ಯಪ್ರೀತಿ ಅರ್ಥಾತ್ ಒಬ್ಬರು ಇನ್ನೊಬ್ಬರಿಂದ ತನು ಹಾಗೂ ಮನಸ್ಸಿನಿಂದ ಬೇರೆಯಾಗಿರುವುದಿಲ್ಲ. ಬೇರೆಯಾಗುವುದೂ ಇಲ್ಲ ಮತ್ತು ಯಾರೂ ಬೇರೆ ಮಾಡುವುದಕ್ಕೂ ಸಾಧ್ಯವಿಲ್ಲ. ಭಲೆ ಇಡೀ ಪ್ರಪಂಚದ ಸರ್ವ ಕೋಟ್ಯಾಂತರ ಆತ್ಮರು. ಪ್ರಕೃತಿ ಮಾಯೆಯ ಪರಿಸ್ಥಿತಿಗಳು ಬೇರ್ಪಡಿಸಲು ಇಚ್ಛಿಸಿದರೂ ಸಹ ಈ ಪರಮಾತ್ಮನ ಮೇಳದಿಂದ ಬೇರೆ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಇದಕ್ಕೇ ಸತ್ಯಪ್ರೀತಿಯೆಂದು ಹೇಳಲಾಗುತ್ತದೆ. ಪ್ರೀತಿಯನ್ನು ದೂರಮಾಡುವವರು ದೂರವಾಗಬಹುದು ಆದರೆ ಪ್ರೀತಿಯು ದೂರವಾಗುವುದಿಲ್ಲ. ಇಷ್ಟು ಪಕ್ಕಾ ಸತ್ಯ ಪ್ರೇಮಿಗಳಾಗಿದ್ದೀರಲ್ಲವೆ.

ಇಂದು ಪಕ್ಕಾ ಪ್ರೀತಿಯ ದಿನವನ್ನು ಆಚರಿಸುತ್ತಿದ್ದೀರಲ್ಲವೆ! ಈ ಪ್ರೀತಿಯು ಈಗ ಮತ್ತು ಈ ಒಂದು ಜನ್ಮದಲ್ಲಿಯೇ ಸಿಗುತ್ತದೆ. ಈ ಸಮಯದ ಪರಮಾತ್ಮ ಪ್ರೀತಿಯು ಅನೇಕ ಜನ್ಮಗಳ ಪ್ರೇಮಸಂಪನ್ನ ಜೀವನದ ಪ್ರಾಲಬ್ಧವನ್ನು ರೂಪಿಸುತ್ತದೆ ಆದರೆ ಪ್ರಾಪ್ತಿಯ ಸಮಯವು ಇದಾಗಿದೆ. ಬೀಜವನ್ನು ಬಿತ್ತುವ ಸಮಯವೂ ಈಗಲೇ ಇದೆ. ಈ ಸಮಯಕ್ಕೆ ಎಷ್ಟೊಂದು ಮಹತ್ವಿಕೆಯಿದೆ! ಯಾರು ಸತ್ಯಹೃದಯದವರಿಗೆ ಪ್ರಿಯರಾಗಿದ್ದಾರೆಯೋ ಅವರು ಸದಾ ಪ್ರೀತಿಯಲ್ಲಿ ಲೀನವಾಗಿರುವ ಲವಲೀನರಾಗಿದ್ದಾರೆ. ಅಂದಮೇಲೆ ಯಾರು ಲವ್ ನಲ್ಲಿ ಲೀನವಾಗುವವರಿದ್ದಾರೆಯೋ ಅಂತಹ ಲವಲೀನ ಆತ್ಮರಮುಂದೆ ಸಮೀಪ ಬರಲು, ಎದುರಿಸಲು ಮತ್ತಾರಿಗೂ ಬಲವಿಲ್ಲ. ಏಕೆಂದರೆ ತಾವು ಲೀನವಾಗಿದ್ದೀರಿ. ಯಾರದೇ ಆಕರ್ಷಣೆಯು ತಮ್ಮನ್ನು ಆಕರ್ಷಿಸಲು ಸಾಧ್ಯವಿಲ್ಲ. ಹೇಗೆ ವೈಜ್ಞಾನಿಕ ಶಕ್ತಿಯು ಧರಣಿಯ ಆಕರ್ಷಣೆಯಿಂದ ದೂರ ತೆಗೆದುಕೊಂಡು ಹೋಗುತ್ತದೆಯೋ ಹಾಗೆಯೇ ಈ ಲವಲೀನ ಸ್ಥಿತಿಯು ಸರ್ವಹದ್ದಿನ ಆಕರ್ಷಣೆಗಳಿಂದ ಬಹುದೂರ ತೆಗೆದುಕೊಂಡು ಹೋಗುತ್ತದೆ. ಒಂದುವೇಳೆ ಲೀನವಾಗಿಲ್ಲವೆಂದರೆ ಡೋಲಾಯಮಾನವಾಗುವ ಸಾಧ್ಯತೆಯಿದೆ. ಪ್ರೀತಿಯಿದೆ ಆದರೆ ಆ ಪ್ರೀತಿಯಲ್ಲಿ ಲೀನರಾಗಿಲ್ಲವೆಂದರ್ಥ. ಈಗ ಯಾರೊಂದಿಗಾದರೂ ಕೇಳಿರಿ- ತಮಗೆ ತಂದೆಯೊಂದಿಗೆ ಪ್ರೀತಿಯಿದೆಯೇ ಎಂದಾಗ ಎಲ್ಲರೂ ಹೌದು ಎಂದೇ ಹೇಳುತ್ತಾರಲ್ಲವೆ. ಆದರೆ ಸದಾ ಆ ಪ್ರೀತಿಯಲ್ಲಿ ಲೀನವಾಗಿರುತ್ತೀರಾ ಎಂದಾಗ ಏನು ಹೇಳುವರು? ಇದರಲ್ಲಿ ಹೌದು ಎನ್ನುವುದಿಲ್ಲ. ಪ್ರೀತಿಯಿದೆ, ಕೇವಲ ಇಷ್ಟರವರೆಗೆ ನಿಂತುಬಿಡಬೇಡಿ. ಆ ಪ್ರೀತಿಯಲ್ಲಿ ಲೀನವಾಗಿಬಿಡಿ. ಇದೇ ಶ್ರೇಷ್ಠಸ್ಥಿತಿಯಲ್ಲಿ ಲೀನವಾಗಿಬಿಡುವುದನ್ನು ಮನುಷ್ಯರು ಬಹಳ ಶ್ರೇಷ್ಠವೆಂದು ನಂಬಿದ್ದಾರೆ. ಒಂದುವೇಳೆ ತಾವುಯಾರಿಗಾದರೂ ನಾವಂತೂ ಜೀವನ್ಮುಕ್ತಿಯಲ್ಲಿ ಬರುತ್ತೇವೆಂದು ಹೇಳಿದಾಗ ಇವರಂತೂ ಜನನ-ಮರಣದ ಚಕ್ರದಲ್ಲಿ ಬರುವವರಾಗಿದ್ದಾರೆ ಆದರೆ ನಾವು ಈ ಚಕ್ರದಿಂದ ಮುಕ್ತರಾಗಿ ಲೀನವಾಗುತ್ತೇವೆ ಎಂದು ತಿಳಿಯುತ್ತಾರೆ ಏಕೆಂದರೆ ಲೀನವಾಗುವುದು ಎಂದರೆ ಬಂಧನಗಳಿಂದ ಮುಕ್ತರಾಗುವುದು. ಆದ್ದರಿಂದ ಅವರು ಲೀನಸ್ಥಿತಿಯನ್ನೇ ಉನ್ನತವಾದುದು ಎಂದು ನಂಬುತ್ತಾರೆ. ಲೀನ ಅರ್ಥಾಥ್ ಸಮಾವೇಶವಾದರು, ಲೀನವಾಗಿಬಿಟ್ಟರು ಎಂದರ್ಥ. ಆದರೆ ಡ್ರಾಮಾನುಸಾರ ಯಾರಿಗೂ ಸಿಗುವುದಿಲ್ಲ. ತಂದೆಯ ಸಮಾನವಾಗಬಲ್ಲಿರೇ ಹೊರತು ಸಮಾವೇಶವಾಗಿಬಿಡುವುದಿಲ್ಲ. ಅವರ ಲೀನಸ್ಥಿತಿಯಲ್ಲಿ ಯಾವುದೇ ಅನುಭೂತಿಯಿಲ್ಲ, ಯಾವುದೇ ಪ್ರಾಪ್ತಿ ಮತ್ತು ಅನುಭೂತಿಯ ಪ್ರಾಪ್ತಿಯಿಲ್ಲ. ಆದರೆ ತಾವು ಲೀನವೂ ಆಗುತ್ತೀರಿ ಮತ್ತು ಅನುಭೂತಿಯ ಪ್ರಾಪ್ತಿಗಳು ಇದೆ. ಯಾವ ಲೀನ ಸ್ಥಿತಿ ಅಥವಾ ಸಮಾವೇಶವಾಗಿ ಬಿಡುವ ಸ್ಥಿತಿಗಾಗಿ ತಾವು ಪ್ರಯತ್ನ ಪಡುತ್ತಿದ್ದೀರೋ , ಅದರ ಅನುಭವವನ್ನು ನಾವೀಗ ಮಾಡುತ್ತಿದ್ದೇವೆ ಎಂದು ತಾವು ಪ್ರತಿಜ್ಞೆ ಮಾಡುತ್ತೀರಿ. ತಾವು ಯಾವಾಗ ಲವಲೀನವಾಗುತ್ತೀರೋ ಮತ್ತು ಸ್ನೇಹದಲ್ಲಿ ಸಮಾವೇಶವಾಗಿ ಬಿಡುತ್ತೀರೋ ಆಗ ಮತ್ತೇನಾದರೂ ನೆನಪಿರುತ್ತದೆಯೇ ತಂದೆ ಮತ್ತು ನಾನು ಸಮಾನ ಸ್ನೇಹದಲ್ಲಿ ಸಮಾವೇಶವಾಗಿದ್ದೇವೆ ತಂದೆಯ ನೆನಪಿನ ಹೊರತು ಮತ್ತೇನು ಇಲ್ಲವೇ ಇಲ್ಲ. ಸ್ನೇಹದಲ್ಲಿ ಲೀನವಾಗಿ ಇರುತ್ತೀರಿ ತಂದೆಯ ಹೊರತು

ಮತ್ತೇನು ಇಲ್ಲದಿದ್ದಾಗ ಇಬ್ಬರು ಜೊತೆಯಾಗಿ, ಒಂದಾಗಿ ಬಿಡುತ್ತೀರಿ. ಸಮಾನವಾಗುವುದು ಅರ್ಥಾಥ್ ಬೆರೆತು ಹೋಗಿ ಬಿಡುವುದು, ಒಂದಾಗಿ ಬಿಡುವುದು. ಈ ವಿಧವಾದ ಅನುಭವವಿದೆ ತಾನೆ? ಕರ್ಮಯೋಗಿ ಸ್ಥಿತಿಯಲ್ಲಿ ಈ ವಿಧವಾದ ಲೀನ ಸ್ಥಿತಿಯನ್ನು ಅನುಭವ ಮಾಡಿಕೊಳ್ಳಬಲ್ಲಿರಾ? ಅಥವಾ ಪ್ರತ್ಯೇಕವಾಗಿ ಕುಳಿತು ಮಾತ್ರ ಲೀನವಾಗಬಲ್ಲಿರಾ? ಏನೆಂದು ತಿಳಿಯುತ್ತೀರಿ? ಕರ್ಮಯೋಗಿ ಸ್ಥಿತಿಯಲ್ಲಿ ಈ ವಿಧವಾಗಿ ಲೀನವಾಗಬಲ್ಲಿರಾ? ಆಗಲಾಗುವುದಿಲ್ಲವೇ? ಕಷ್ಟವೇ? ಕರ್ಮ ಕೂಡ ಮಾಡಿರಿ ಮತ್ತು ಲೀನವಾಗಿಯೂ ಇರಿ. ಈ ರೀತಿಯಾಗಿ ಇರಬಲ್ಲಿರಾ? ಕರ್ಮ ಮಾಡಲು ಕೆಳಗೆ ಬರಬೇಕಾಗಿ ಇರುವುದಿಲ್ಲವೇ? ಕರ್ಮ ಮಾಡುತ್ತಾ ಕೂಡ ಲೀನವಾಗಬಲ್ಲಿರಾ ಇಷ್ಟು ಬುದ್ಧಿವಂತರಾಗಿದ್ದೀರಾ?

ಕರ್ಮಯೋಗಿಗಳಾಗುವವರಿಗೆ ಕರ್ಮದಲ್ಲಿಯೂ ತಂದೆಯ ಜೊತೆಯಿರುವ ಕಾರಣ ಹೆಚ್ಚು ಸಹಯೋಗ ಸಿಗುತ್ತದೆ. ಏಕೆಂದರೆ ಒಬ್ಬರಿಂದ ಇಬ್ಬರಾಗಿಬಿಟ್ಟಿರಿ ಆದ್ದರಿಂದ ಕೆಲಸವು ಹಂಚಲ್ಪಟ್ಟಿತಲ್ಲವೆ? ಒಂದುವೇಳೆ ಒಬ್ಬರು ಮಾಡುವ ಕೆಲಸವನ್ನು ಇನ್ನೊಬ್ಬರು ಸಹಯೋಗಿಯಾಗಿ ಮಾಡಿದರೆ ಸಹಜವಾಗುವುದೋ? ಕಷ್ಟವಾಗುವುದೋ? ಕೈಗಳು ತಮ್ಮದೇ ಆಗಿದೆ. ತಂದೆಯಂತೂ ತಮ್ಮ ಕೈಕಾಲುಗಳನ್ನು ನಡೆಸುವುದಿಲ್ಲ ಆದರೆ ಸಹಯೋಗವು ತಂದೆಯದಾಗಿದೆ ಅಂದಮೇಲೆ ಡಬಲ್ ಫೋರ್ಸ್‌ನಿಂದ ಕೆಲಸವು ಚೆನ್ನಾಗಿಯೇ ಆಗುತ್ತದೆಯಲ್ಲವೆ? ಕೆಲಸವು ಭಲೆ ಎಷ್ಟೇ ಕಷ್ಟದ್ದಾಗಿರಲಿ ಆದರೆ ಸದಾ ಉತ್ಸಾಹ-ಉಲ್ಲಾಸ, ಧೈರ್ಯ, ಅವಿಶ್ರಾಂತತೆಯ ಶಕ್ತಿ ನೀಡುವಂತಹ ತಂದೆಯ ಸಹಯೋಗ ಇದ್ದೇ ಇರುತ್ತದೆ. ಯಾವ ಕಾರ್ಯದಲ್ಲಿ ಉತ್ಸಾಹ-ಉಲ್ಲಾಸ ಹಾಗೂ ಅವಿಶ್ರಾಂತತೆ. ಇರುತ್ತದೆಯೋ ಆ ಕೆಲಸವು ಸಫಲವಾಗುತ್ತದೆಯಲ್ಲವೆ. ಅಂದಾಗ ತಂದೆಯು ಕೈಗಳಿಂದ ಕೆಲಸ ಮಾಡುವುದಿಲ್ಲ ಆದರೆ ಸಹಯೋಗ ನೀಡುವ ಕಾರ್ಯ ಮಾಡುತ್ತಾರೆ ಆದ್ದರಿಂದ ಕರ್ಮಯೋಗಿ ಜೀವನ ಅರ್ಥಾತ್ ಡಬಲ್ ಫೋರ್ಸ್‌ನಿಂದ ಕಾರ್ಯ ಮಾಡುವ ಜೀವನವಾಗಿದೆ. ತಾವು ಮತ್ತು ತಂದೆ, ಪ್ರೀತಿಯಲ್ಲಿ ಯಾವುದೇ ಕಷ್ಟ ಅಥವಾ ಸುಸ್ತಿನ ಅನುಭವವಾಗುವುದಿಲ್ಲ. ಪ್ರೀತಿ ಅರ್ಥಾತ್ ಎಲ್ಲವನ್ನೂ ಮರೆತುಬಿಡುವುದು. ಹೇಗಾಗುವುದೋ, ಏನಾಗುವುದೋ ಸರಿಯಾಗಿ ಆಗುತ್ತದೆಯೋ, ಇಲ್ಲವೋ ಇದೆಲ್ಲವನ್ನೂ ಮರೆತುಬಿಡುವುದು. ಎಲ್ಲವೂ ಆಗಿಯೇ ಇದೆ ಏಕೆಂದರೆ ಎಲ್ಲಿ ಪರಮಾತ್ಮನ ಧೈರ್ಯವಿದೆಯೋ ಅಲ್ಲಿ ಯಾವುದೇ ಆತ್ಮನ ಧೈರ್ಯ ಸಾಲುವುದಿಲ್ಲ. ಅಂದಮೇಲೆ ಎಲ್ಲಿ ಪರಮಾತ್ಮನ ಧೈರ್ಯ, ಸಹಾಯವಿದೆಯೋ ಅಲ್ಲಿ ನಿಮಿತ್ತನಾಗಿರುವ ಆತ್ಮನಲ್ಲಿ ಧೈರ್ಯ ಬಂದೇ ಬರುತ್ತದೆ ಮತ್ತು ಹೀಗೆ ಜೊತೆಯ ಅನುಭವ ಮಾಡುವವರು, ಸಹಯೋಗದ ಅನುಭವ ಮಾಡುವವರ ಸಂಕಲ್ಪವು ಹೇಗಿರುತ್ತದೆ? ನತಿಂಗ್‌ನ್ಯೂ ವಿಜಯವು ಆಗಿಬಿಟ್ಟಿದೆ. ಸಫಲತೆಯು ಇದ್ದೇ ಇದೆ. ಇದು ಸತ್ಯಪ್ರೇಮಿಗಳ ಅನುಭೂತಿಯಾಗಿದೆ. ಹದ್ದಿನಲ್ಲಿರುವ ಪ್ರೇಮಿಗಳೇ ಎಲ್ಲಿ ನೋಡಿದರಲ್ಲಿ ನೀನೇ ನೀನು ಎಂಬ ಅನುಭವ ಮಾಡುತ್ತಾರೆ- ಆದರೆ ಅವರೇನೂ ಸರ್ವಶಕ್ತಿವಂತರಲ್ಲ, ತಂದೆಯು ಸರ್ವಶಕ್ತಿವಂತರಾಗಿದ್ದಾರೆ. ಸಾಕಾರ ಶರೀರಧಾರಿಯಲ್ಲ ಆದರೆ ಯಾವಾಗ ಬೇಕೋ, ಎಲ್ಲಿ ಬೇಕೋ ಸೆಕೆಂಡಿನಲ್ಲಿ ತಲುಪಿಬಿಡುತ್ತಾರೆ. ಕರ್ಮಯೋಗಿ ಜೀವನದಲ್ಲಿ ಲವಲೀನ ಸ್ಥಿತಿಯು ಸಾಧ್ಯವಿಲ್ಲವೆಂದು ತಿಳಿಯಬೇಡಿ. ಸಾಧ್ಯತೆಯಿದೆ. ಜೊತೆಯ ಅನುಭವ ಅರ್ಥಾತ್ ಪ್ರೀತಿಯ ಪ್ರತ್ಯಕ್ಷ ಪ್ರಮಾಣವು ಜೊತೆಯಿರುತ್ತದೆ ಅಂದಮೇಲೆ ಸಹಜಯೋಗಿಗಳು, ಸದಾಕಾಲದ ಯೋಗಿಗಳಾಗಿಬಿಟ್ಟಿದ್ದೀರಲ್ಲವೆ. ಲವರ್ (ಪ್ರೇಮಿ) ಅರ್ಥಾತ್ ಸದಾ ಸಹಜಯೋಗಿ. ಆದ್ದರಿಂದಲೇ ಸೂಚನೆಯನ್ನೂ ನೀಡಿದ್ದೇವೆ- ಈ ತಪಸ್ಯಾ ವರ್ಷದಲ್ಲಿ ಬಹುಮಾನವನ್ನು ತೆಗೆದುಕೊಳ್ಳುವ ಸಮಯವು ಸಮೀಪ ಬರುತ್ತಿದೆ ಆದರೆ ಸಮಾಪ್ತಿಯಾಗುತ್ತಿಲ್ಲ. ಇದರಲ್ಲಿ ಅಭ್ಯಾಸಕ್ಕಾಗಿ ಅನುಭೂತಿಗಾಗಿ ಸೇವೆಯನ್ನು ಹಗುರ ಮಾಡಿದೆವು ಮತ್ತು ತಪಸ್ಸಿಗೆ ಹೆಚ್ಚು ಮಹತ್ವಿಕೆ ನೀಡಿದೆವು. ಆದರೆ ಈ ತಪಸ್ಸಿನ ವರ್ಷವು ಸಂಪನ್ನವಾದ ನಂತರ ಬಹುಮಾನವನ್ನಂತೂ ತೆಗೆದುಕೊಳ್ಳುವಿರಿ ಆದರೆ ಮುಂದೆ ಯಾವ ಕರ್ಮ ಮತ್ತು ಯೋಗ, ಸೇವೆ ಮತ್ತು ಯೋಗ ಹೀಗೆ ಯಾವುದೆಲ್ಲಾ ಬ್ಯಾಲೆನ್ಸ್ ನ ಸ್ಥಿತಿಯನ್ನು ತಿಳಿಸಲಾಗಿದೆಯೋ, ಬ್ಯಾಲೆನ್ಸ್‌ನ ಅರ್ಥವೇ ಆಗಿದೆ- ಸಮಾನತೆ. ನೆನಪು, ತಪಸ್ಸು ಮತ್ತು ಸೇವೆ- ಇದರಲ್ಲಿ ಸಮಾನತೆಯಿರಲಿ, ಶಕ್ತಿ ಮತ್ತು ಸ್ನೇಹದಲ್ಲಿ ಸಮಾನತೆಯಿರಲಿ. ಭಿನ್ನ ಮತ್ತು ಪ್ರಿಯರಾಗಿರುವುದರಲ್ಲಿ ಸಮಾನತೆಯಿರಲಿ ಕರ್ಮಮಾಡುತ್ತಾ ಮತ್ತು ಕರ್ಮದಿಂದ ಅತೀತರಾಗಿ ಕುಳಿತುಕೊಳ್ಳುವುದರಲ್ಲಿ ಸ್ಥಿತಿಯ ಸಮಾನತೆಯಿರಲಿ. ಯಾರು ಈ ಸಮಾನತೆಯ ಬ್ಯಾಲೆನ್ಸ್‌ನ ಕಲೆಯಲ್ಲಿ ಜಯಿಸುವರೋ ಅವರು ಮಹಾನರಾಗುವರು. ಅಂದಮೇಲೆ ಎರಡನ್ನೂ ಮಾಡಬಲ್ಲಿರಾ

ಅಥವಾ ಇಲ್ಲವೋ? ಸೇವೆಯನ್ನು ಆರಂಭಿಸಿದಾಗ ಮೇಲಿನಿಂದ ಕೆಳಗೆ ಬಂದುಬಿಡುತ್ತೀರಾ? ಈ ವರ್ಷವಂತೂ ಪಕ್ಕಾ ಆಗಿಬಿಟ್ಟಿದ್ದೀರಲ್ಲವೆ. ಈಗ ಬ್ಯಾಲೆನ್ಸ್ ಇಟ್ಟುಕೊಳ್ಳುತ್ತೀರೋ ಅಥವಾ ಇಲ್ಲವೋ? ಸೇವೆಯಲ್ಲಿ ಕಿರಿಕಿರಿಯಾಗುತ್ತದೆ ಆದರೆ ಇದರಲ್ಲಿಯೂ ಪಾಸ್ ಆಗಬೇಕಲ್ಲವೆ. ಮೊದಲೂ ತಿಳಿಸಿದೆವು- ಕರ್ಮ ಮಾಡುತ್ತಲೂ ಕರ್ಮಯೋಗಿ ಆಗುತ್ತಲೂ ಲವಲೀನರಾಗಬಹುದು ಅಂದಮೇಲೆ ವಿಜಯಿಗಳಾಗಿಬಿಡುತ್ತೀರಲ್ಲವೆ. ಯಾರು ಬ್ಯಾಲೆನ್ಸ್ ಇಡುವುದರಲ್ಲಿ ವಿಜಯಿಗಳಾಗುವರೋ ಅವರಿಗೇ ಈಗ ಬಹುಮಾನ ಸಿಗುವುದು.

ಇಂದು ವಿಶೇಷ ನಿಮಂತ್ರಣ ನೀಡಿದ್ದೇವೆ. ತಮ್ಮ ಸ್ವರ್ಗವು ಈ ರೀತಿಯಿರುವುದೇ? ಬಾಪ್‌ದಾದಾ ಮಕ್ಕಳ ಆಚರಣೆಯಲ್ಲಿಯೇ ತಮ್ಮ ಆಚರಣೆಯೆಂದು ತಿಳಿಯುತ್ತಾರೆ. ತಾವು ಸ್ವರ್ಗದಲ್ಲಿ ಆಚರಿಸುತ್ತೀರಿ. ತಂದೆಯು ಈ ಆಚರಣೆಯಲ್ಲಿಯೇ ಸಂತುಷ್ಟರಾಗುತ್ತೇವೆ. ಬಹಳ ವಿಜೃಂಭಣೆಯಿಂದ ಆಚರಿಸಿರಿ, ನಲಿಯಿರಿ-ಕುಣಿಯಿರಿ, ಸದಾ ಖುಷಿಯನ್ನಾಚರಿಸಿ, ಪುರುಷಾರ್ಥದ ಪ್ರಾಲಬ್ಧವು ಅವಶ್ಯವಾಗಿ ಸಿಗುವುದು. ಇಲ್ಲಿ ಸಹಜ ಪುರುಷಾರ್ಥಿಗಳಾಗಿದ್ದರೆ ಅಲ್ಲಿ ಸಹಜ ಪ್ರಾಲಬ್ದಿಗಳಾಗುವಿರಿ. ಅದರೆ ವಜ್ರಸಮಾನರಿಂದ ಚಿನ್ನದ ಸಮಾನರಾಗಿಬಿಡುತ್ತೀರಿ. ಈಗ ವಜ್ರವಾಗಿದ್ದೀರಿ. ಇಡೀ ಸಂಗಮಯುಗವೇ ತಮಗಾಗಿ ವಿಶೇಷ ತಂದೆ ಮತ್ತು ಮಕ್ಕಳು ಅಥವಾ ಸಂಗಾತಿಗಳಾಗುವ ಪ್ರೇಮದಿವಸವಾಗಿದೆ. ಕೇವಲ ಇಂದುಮಾತ್ರ ಪ್ರೇಮದ ದಿನವಾಗಿದೆಯೋ ಅಥವಾ ಸದಾ ಪ್ರೇಮದ ದಿನವೋ? ಇದೂ ಸಹ ಬೇಹದ್ದಿನ ಡ್ರಾಮಾದ ಆಟದಲ್ಲಿ ಚಿಕ್ಕ-ಚಿಕ್ಕ ಆಟವಾಗಿದೆ. ಸ್ವರ್ಗದ ದೃಶ್ಯವನ್ನು ಇಷ್ಟು ಚೆನ್ನಾಗಿ ಶೃಂಗರಿಸಿದ್ದೀರಿ. ಇದಕ್ಕಾಗಿ ಶುಭಾಷಯಗಳು. ಈ ಶೃಂಗಾರವು ತಂದೆಗೆ ಶೃಂಗಾರವೆನಿಸುವುದಿಲ್ಲ. ಆದರೆ ಎಲ್ಲರ ಹೃದಯದ ಪ್ರೀತಿಯು ಕಂಡುಬರುತ್ತದೆ, ತಮ್ಮ ಸತ್ಯಪ್ರೀತಿಯ ಮುಂದೆ ಈ ಶೃಂಗಾರವು ಏನೇನೂ ಇಲ್ಲ. ಬಾಪ್‌ದಾದಾ ಪ್ರೀತಿಯನ್ನು ನೋಡುತ್ತಿದ್ದೇವೆ. ವಾಸ್ತವದಲ್ಲಿ ಯಾರಿಗಾದರೂ ನಿಮಂತ್ರಣ ಕೊಡುತ್ತಾರೆಂದರೆ ಆ ನಿಮಂತ್ರಣದಲ್ಲಿ ಬರುವವರು ಮಾತನಾಡುವುದಿಲ್ಲ. ನಿಮಂತ್ರಣ ನೀಡುವವರು ಮಾತನಾಡುತ್ತಾರೆ. ಮಕ್ಕಳಿಗೆ ಇಷ್ಟೂ ಪ್ರೀತಿಯಿದೆ. ತಂದೆಯ ವಿನಃ ಮತ್ತೇನೂ ಕಾಣಿಸುವುದಿಲ್ಲ ಆದ್ದರಿಂದ ಹೃದಯದ ಪ್ರೀತಿಯನ್ನು ಪ್ರತ್ಯಕ್ಷಗೊಳಿಸುವುದಕ್ಕಾಗಿ ಇಂದು ಈ ಆಟವನ್ನು ರಚಿಸಿದ್ದೀರಿ.

**ಸದಾ ಸ್ನೇಹದಲ್ಲಿ ಸಮಾವೇಶವಾಗಿರುವ ಸರ್ವಾತ್ಮರಿಗೆ, ಸದಾ ಸ್ನೇಹದ ಸಾಂಗತ್ಯವನ್ನು ಅನುಭವ ಮಾಡುವಂತಹ ಆತ್ಮರಿಗೆ, ಸದಾ ಒಬ್ಬ ತಂದೆಯ ವಿನಃ ಯಾರೂ ಇಲ್ಲ- ಇಂತಹ ಸಮೀಪ ಸಮಾನ ಆತ್ಮರಿಗೆ ಸಂಗಮಯುಗದ ಶ್ರೇಷ್ಠ ಕಲೆಯ ಅನುಭವ ಮಾಡುವಂತಹ ವಿಶೇಷ ಆತ್ಮರಿಗೆ, ಸದಾ ಸರ್ವ ಹದ್ದಿನ ಆಕರ್ಷಣೆಗಳಿಂದ ಮುಕ್ತ, ಲವಲೀನ ಆತ್ಮರಿಗೆ ತಂದೆಯ ಸರ್ವ ಸಂಬಂಧಗಳ ಸ್ನೇಹಸಂಪನ್ನ, ನೆನಪು-ಪ್ರೀತಿ ಹಾಗೂ ನಮಸ್ತೆ.**

**ಮಹಾರಥಿ ದಾದಿಯವರೊಂದಿಗೆ & ಮುಖ್ಯ ಸಹೋದರರೊಂದಿಗೆ:**

ಯಾರು ನಿಮಿತ್ತರಾಗಿದ್ದಾರೆ ಅವರನ್ನು ಸದಾ ಸಹಜ ನೆನಪು ಮಾಡುತ್ತಾರೆ ನಾವೆಲ್ಲರು ನಿಮಿತ್ತರಾಗಿರುವ ಆತ್ಮರಿಂದ ವಿಶೇಷ ಪ್ರೀತಿಯಿದೆ ಆದ್ದರಿಂದ ನೀವೆಲ್ಲರೂ ಸಮಾವೇಶವಾಗಿದ್ದೀರಿ. ನಿಮಿತ್ತರಾಗಿರುವ ಆತ್ಮಗಳ ಡ್ರಾಮಾದಲ್ಲಿ ಪಾತ್ರ ನಿಗಧಿತವಾಗಿದೆ. ಶಕ್ತಿಗಳೂ ಸಹ ನಿಮಿತ್ತರಾಗಿದ್ದಾರೆ ಪಾಂಡವರೂ ಸಹ ನಿಮಿತ್ತರಾಗಿದ್ದಾರೆ. ಡ್ರಾಮಾ ಶಕ್ತಿಯರನ್ನು, ಹಾಗೂ ಪಾಂಡವರನ್ನು ಜೊತೆ-ಜೊತೆಯಲ್ಲಿ ನಿಮಿತ್ತರನ್ನಾಗಿ ಮಾಡಿಸಿದೆ. ಹಾಗಾದರೆ ನಿಮಿತ್ತರಾಗುವ ವಿಶೇಷ ಗಿಫ್ಟ್ ಸಿಕ್ಕಿದೆ. ನಿಮಿತ್ತರಾಗಿರುವವರ ಪಾತ್ರ ಸದಾ ಭಿನ್ನ ಹಾಗೂ ಪ್ರಿಯವಾಗಿರುತ್ತದೆ ಒಂದು ವೇಳೆ ನಿಮಿತ್ತ ಭಾವದ ಅಭ್ಯಾಸ ಸ್ವತಃ ಹಾಗೂ ಸಹಜವಾಗಿದೆ ಎಂದಮೇಲೆ ಸದಾ ಸ್ವಯಂನ ಪ್ರಗತಿ ಹಾಗು ಸರ್ವರ ಪ್ರಗತಿ ಅವರಿಗೆ ಪ್ರತೀ ಹೆಜ್ಜೆಯಲ್ಲಿ ಸಮಾವೇಶವಾಗಿದೆ. ಅಂತಹ ಆತ್ಮರ ಹೆಜ್ಜೆ ಧರಣಿಯ ಮೇಲಲ್ಲ ಆದರೆ ಸ್ಟೇಜ್‌ನ ಮೇಲಿದೆ. ನಾಲ್ಕಾರು ಕಡೆಯ ಆತ್ಮರು ಸ್ಟೇಜನ್ನು ಸ್ವತಃವಾಗಿ ನೋಡುತ್ತಾರೆ. ಬೇಹದ್ದಿನ ವಿಶ್ವದ ಸ್ಟೇಜ್ ಆಗಿದೆ ಹಾಗು ಸಹಜ ಪುರುಷಾರ್ಥಕ್ಕೂ ಶ್ರೇಷ್ಟ ಸ್ಟೇಜ್ ಇದೆ. ಎರಡೂ ಸ್ಟೇಜ್ ಗಳೂ ಶ್ರೇಷ್ಠವಾಗಿವೆ. ಇದು ವಿಶ್ವದ ಮುಂದೆ ಒಂದು ತಂದೆಯ ಸಮಾನದ ಉದಾಹರಣೆಯಾಗಿದೆ ಎಂಬ ನಿಮಿತ್ತರಾಗಿರುವ ಅತ್ಮರಿಗೆ ಸದಾ ಸ್ಮೃತಿ ಸ್ವರೂಪವಾಗಿರುತ್ತದೆ. ಈ ರೀತಿ ನಿಮಿತ್ತ

ಆತ್ಮರಾಗಿದ್ದೀರಲ್ಲವೆ? ಸ್ಥಾಪನೆಯ ಆದಿಯಿಂದ ಇಲ್ಲಿಯವರೆಗೆ ನಿಮಿತ್ತರಾಗಿದ್ದೀರಿ ಹಾಗು ಸದಾ ಆಗಿರುತ್ತೀರಿ. ಹೀಗೇ ಇರುತ್ತೀರಲ್ಲವೆ? ಇದೂ ಸಹ ಎಕ್ಸ್ಟ್ರಾ ಲಕ್ ಆಗಿದೆ. ಹಾಗು ಲಕ್ ಹೃದಯದ ಪ್ರೀತಿಯನ್ನು ಸ್ವತಃವಾಗಿ ಹೆಚ್ಚಿಸುತ್ತದೆ. ಒಳ್ಳೆಯದು. ನಿಮಿತ್ತರಾಗಿ ಪ್ಲಾನ್ ಮಾಡುತ್ತಿದ್ದೀರಿ. ಬಾಪ್ ದಾದಾರವರ ಹತ್ತಿರವಂತು ತಲುಪುತ್ತದೆ. ಪ್ರಾಕ್ಟಿಕಲ್ ನಲ್ಲಿ ಸ್ವಯಃ ಶಕ್ತಿಶಾಲಿಯಾಗಿ ಅನ್ಯರಲ್ಲೂ ಶಕ್ತಿಯನ್ನು ತುಂಬುತ್ತಾ ಪ್ರತ್ಯಕ್ಷತೆಯನ್ನು ಸಮೀಪ ತರುತ್ತಾ ಹೋಗಿರಿ. ಈಗ ಮೆಜಾರಿಟಿ ಆತ್ಮರು ಈ ಪ್ರಪಂಚವನ್ನು ನೋಡಿ ನೋಡಿ ದಣಿದುಬಿಟ್ಟಿದ್ದಾರೆ. ನವೀನತೆಯನ್ನು ಬಯಸುತ್ತಾರೆ. ನವೀನತೆಯ ಅನುಭವವನ್ನು ಈಗಲೇ ಮಾಡಿಸಬಹುದು. ಏನು ಮಾಡಿದಿರಿ ಬಹಳ ಒಳ್ಳೆಯದು. ಪ್ರಾಕ್ಟಿಕಲ್ ನಲ್ಲಿ ಸಹ ಬಹಳ ಒಳ್ಳೆಯದಾಗಿಯೇ ಮಾಡಬೇಕಾಗಿದೆ. ದೇಶ ವಿದೇಶದವರು ಒಳ್ಳೆಯ ರೀತಿಯಲ್ಲಿ ಯುಕ್ತಿಯನ್ನು ಮಾಡಿದ್ದಾರೆ. ಬ್ರಹ್ಮಾ ತಂದೆಯನ್ನು ಪ್ರತ್ಯಕ್ಷ ಮಾಡಿದರು ಅರ್ಥಾತ್ ಬಾಪ್ ದಾದಾರವರನ್ನು ಜೊತೆ-ಜೊತೆ ಪ್ರತ್ಯಕ್ಷ ಮಾಡಿದರು. ಏಕೆಂದರೆ ತಂದೆ ಯಾವಾಗ ತಯಾರುಮಾಡಿದರೋ ಆಗಲೇ ಬ್ರಹ್ಮಾರವರು ತಯಾರಾದರು. ಹಾಗಾದರೆ ತಂದೆಯಲ್ಲಿ ದಾದಾ (ತಾತ.ಅಣ್ಣ) ಸಮಾವೇಶರಾಗಿದ್ದಾರೆ. ಈ ರೀತಿ ಬ್ರಹ್ಮಾ ತಂದೆಯನ್ನು ಫಾಲೋ ಮಾಡುವುದು ಅರ್ಥಾತ್ ಲವಲೀನ ಅತ್ಮನಾಗುವುದು. ಈ ರೀತಿ ಇದೆಯಲ್ಲವೇ, ಒಳ್ಳೆಯದು.

**ಪಾರ್ಟಿಯೊಂದಿಗೆ ಭೇಟಿ:**

ಎಲ್ಲರ ಹೃದಯದ ಮಾತು ಹೃದಯರಾಮನ ಹತ್ತಿರ ಬಹಳ ತೀವ್ರಗತಿಯಿಂದ ತಲುಪುತ್ತದೆ. ನೀವೆಲ್ಲರೂ ಸಂಕಲ್ಪ ಮಾಡುತ್ತೀರಿ ಹಾಗು ಬಾಪ್ ದಾದಾರವರ ಹತ್ತಿರ ತಲುಪಿಬಿಡುತ್ತದೆ. ಬಾಪ್ ದಾದಾರವರೂ ಸಹ ಎಲ್ಲರ ತಮ್ಮ-ತಮ್ಮ ವಿಧಿಪೂರ್ವಕ ಸಂಕಲ್ಪ, ಸೇವೆ ಹಾಗು ಸ್ಥಿತಿ, ಎಲ್ಲರನ್ನೂ ನೋಡುತ್ತಿರುತ್ತಾರೆ. ಎಲ್ಲರೂ ಪುರುಷಾರ್ಥಿಗಳಾಗಿದ್ದೀರಿ. ಲಗನ್ ಸಹ ಎಲ್ಲರಲ್ಲಿದೆ ಆದರೆ ವರೈಟಿ ಎಲ್ಲರಲ್ಲಿದೆ. ಎಲ್ಲರ ಲಕ್ಷ್ಯ ಶ್ರೇಷ್ಠವಿರುವ ಕಾರಣ ಹೆಜ್ಜೆಯು ಮುಂದುವರೆಯುತ್ತಿದೆ. ಕೆಲವರು ತೀವ್ರ ಗತಿಯಿಂದ ಮುಂದುವರೆಯುತ್ತಿದ್ದಾರೆ. ಕೆಲವರು ಸಾಧಾರಣ ರೀತಿಯಲ್ಲಿ ಮುಂದುವರೆಯುತ್ತಿದ್ದಾರೆ. ಪ್ರಗತಿಯೂ ಆಗುತ್ತದೆ ಆದರೆ ನಂಬರ್‌ವಾರ್, ತಪಸ್ಸಿನ ಉಮಂಗ-ಉತ್ಸಾಹವೂ ಎಲ್ಲರಲ್ಲಿದೆ. ಆದರೆ ನಿರಂತರ ಹಾಗು ಸಹಜದಲ್ಲಿ ಅಂತರವಾಗಿ ಬಿಡುತ್ತದೆ. ಎಲ್ಲದಕ್ಕಿಂತ ಸಹಜ ಮತ್ತು ನಿರಂತರ ನೆನಪಿನ ಸಾಧನವಾಗಿದೆ ಸದಾ ತಂದೆಯ ಜೊತೆ(ಸಾಂಗತ್ಯ) ಅನುಭವವಾಗಲಿ, ಜೊತೆಯ ಅನುಭೂತಿ ನೆನಪು ಮಾಡುವ ಪರಿಶ್ರಮದಿಂದ ಮುಕ್ತರನ್ನಾಗಿ ಮಾಡುತ್ತದೆ. ಯಾವಾಗ ಜೊತೆಯಿರುತ್ತಾರೆಂದರೆ ನೆನಪಂತೂ ಇರುತ್ತದೆಯಲ್ಲವೇ? ಹಾಗು ಜೊತೆ ಕೇವಲ ಈ ರೀತಿಯಲ್ಲಿ ಜೊತೆಯಲ್ಲಿ ಯಾರೋ ಕುಳಿತಿದ್ದಾರೆ. ಆದರೆ ಜೊತೆಗಾರ ಅರ್ಥಾತ್ ಸಹಯೋಗಿಯಾಗಿದ್ದಾರೆ. ಜೊತೆಗಾರ ತಮ್ಮ ಕಾರ್ಯದಲ್ಲಿ ವ್ಯಸ್ತವಾಗಿದ್ದಾಗ ಮರೆತು ಹೋಗಬಹುದು ಆದರೆ ಜೊತೆಗಾರ ಮರೆಯುವುದಿಲ್ಲ. ಹಾಗಾದರೆ ಪ್ರತಿಯೊಂದು ಕರ್ಮದಲ್ಲಿ ತಂದೆಯ ಜೊತೆ ಜೊತೆಗಾರನ ರೂಪದಲ್ಲಿದ್ದಾರೆ. ಜೊತೆ ಕೊಡುವಂತಹವರು ಎಂದೂ ಮರೆಯುವುದಿಲ್ಲ. ಜೊತೆಗಿದ್ದಾರೆ. ಜೊತೆಗಾರರಾಗಿದ್ದಾರೆ ಹಾಗು ಇಂತಹ ಜೊತೆಗಾರರಾಗಿದ್ದಾರೆ ಯಾರು ಕರ್ಮವನ್ನು ಸಹಜ ಕರ್ಮವನ್ನಾಗಿ ಮಾಡಿಸುವಂತಹವರಾಗಿದ್ದಾರೆ. ಅವರು ಹೇಗೆ ಮರೆಯಲು ಸಾಧ್ಯ. ಸಾಧಾರಣ ರೀತಿಯಿಂದಾದರೂ ಒಂದು ವೇಳೆ ಯಾವುದೇ ಕಾರ್ಯದಲ್ಲಿ ಯಾರೇ ಸಹಯೋಗ ಕೊಡುತ್ತಾರೆಂದರೆ ಅವರಿಗೋಸ್ಕರ ಮತ್ತೆ-ಮತ್ತೆ ಹೃದಯದಿಂದ ಧನ್ಯವಾದದ ಗೀತೆಯನ್ನು ಹಾಡಲಾಗುತ್ತದೆ. ಹಾಗು ತಂದೆಯು ಜೊತೆಗಾರರಾಗಿ ಪರಿಶ್ರಮವನ್ನು ಸಹಜವನ್ನಾಗಿ ಮಾಡುವಂತಹವರಾಗಿದ್ದಾರೆ. ಇಂತಹ ಜೊತೆಗಾರನನ್ನು ಹೇಗೆ ಮರೆಯಲು ಸಾಧ್ಯ? ಒಳ್ಳೆಯದು.

ರಿವೈಸ್ ಕೋರ್ಸ್ 13-02-1992.

***ಅನೇಕ ಜನ್ಮಗಳ ಪ್ರೇಮ ಸಂಪನ್ನ ಜೀವನವನ್ನು ರೂಪಿಸಿಕೊಳ್ಳುವ ಆಧಾರ- ಈ ಜನ್ಮದ ಪರಮಾತ್ಮನ ಪ್ರೀತಿ.***

ಸತ್ಯವಾದ ಪ್ರೀತಿ ಅರ್ಥಾತ್ ವಿಶ್ವದಲ್ಲಿರುವ ಆತ್ಮರು, ಪ್ರಕೃತಿ, ಮಾಯೆ, ಪರಿಸ್ಥಿತಿಗಳು ಬೇರ್ಪಡಿಸಲು ಇಚ್ಛಿಸಿದರೂ ಬೇರೆಯಾಗದ ಪ್ರೇಮಿಕರು. ಈ ಸಮಯದಲ್ಲಿಯೇ ಪರಮಾತ್ಮನ ಪ್ರೀತಿ ಅನೇಕ ಜನ್ಮಗಳ ಪ್ರೇಮಸಂಪನ್ನ ಜೀವನದ ಪ್ರಾಲಬ್ದವನ್ನು ರೂಪಿಸುತ್ತದೆ. ಪ್ರೀತಿಯಲ್ಲಿ ಲೀನವಾಗಿರುವ ಲವಲಿನ ಸ್ಥಿತಿ ಸರ್ವಹದ್ದಿನ ಆಕರ್ಷಣೆಗಳಿಂದ ಅತೀತವಾಗಿ ತಯಾರು ಮಾಡುತ್ತದೆ. ಈ ಲವಲಿನ ಸ್ಥಿತಿ ಅಥವಾ ಬೆರೆತು ಹೋಗುವ ಸ್ಥಿತಿಯನ್ನು ಈ ಜೀವನದಲ್ಲಿಯೇ ನೀವು ಅನುಭವ ಮಾಡಿಕೊಳ್ಳುತ್ತಿದ್ದೀರಿ. ಇದರೊಂದಿಗೆ ಪ್ರಾಪ್ತಿಗಳನ್ನು ಕೂಡ ಪಡೆಯುತ್ತಿದ್ದೀರಿ. ಕರ್ಮ ಯೋಗಿಯಾಗಿ ಕರ್ಮ ಮಾಡುವುದರಿಂದ ತಂದೆಯ ಜೊತೆ ಇರುವ ಕಾರಣ ಆ ಕರ್ಮವನ್ನು ಇಬ್ಬರು ಜೊತೆಯಾಗಿ ಮಾಡಿದ ಹಾಗೆ ಅನುಭವವಾಗುತ್ತದೆ ಅರ್ಥಾಥ್ ಸ್ಥೂಲ ಕರ್ಮಗಳನ್ನು ಮಾಡುತ್ತೇವೆ. ಆದರೆ ಪರಮಾತ್ಮನ ಧೈರ್ಯ ಮತ್ತು ಸಹಾಯದಿಂದ ಶಕ್ತಿಯನ್ನು ಪಡೆದು ವಿಜಯವನ್ನು, ಸಫಲತೆಯನ್ನು ಸಹಜವಾಗಿ ಅನುಭವ ಮಾಡಿಕೊಳ್ಳುತ್ತೇವೆ. ಎಂದು ಹೇಳುತ್ತಾ, ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಪ್ರೀತಿಯ ಮಿಲನ ಮೇಳದಲ್ಲಿ ಇರುವ ಪ್ರಿಯವಾದ ಮಗುವಾಗಿದ್ದೇನೆ.

2. ನಾನು ಪ್ರಪಂಚದಲ್ಲಿರುವ ಕೋಟಾನುಕೋಟಿ ಆತ್ಮರು, ಪ್ರಕೃತಿ, ಮಾಯೆ, ಪರಿಸ್ಥಿತಿಗಳು ಬೇರ್ಪಡಿಸಲು ಇಚ್ಛಿಸಿದರೂ ಪರಮಾತ್ಮನ ಮಿಲನದಿಂದ ಬೇರೆಯಾಗದ ಸತ್ಯವಾದ ಪ್ರೇಯಸಿಯಾಗಿದ್ದೇನೆ.

3. ನಾನು ಸದಾ ಪರಮಾತ್ಮನ ಪ್ರೀತಿಯ ಲವಲೀನ ಸ್ಥಿತಿಯಲ್ಲಿ ಇರುವುದರಿಂದ ಹದ್ದಿನ ಆಕರ್ಷಣೆಗಳಿಗೆ ಅತೀತವಾಗಿ ಇದ್ದೇನೆ.

4. ನಾನು ಈ ಸಮಯದಲ್ಲಿ ಪರಮಾತ್ಮನ ಪ್ರೀತಿಯಿಂದ ಅನೇಕ ಜನ್ಮಗಳ ಪ್ರೇಮ ಸಂಪನ್ನ ಜೀವನದ ಪ್ರಾಲಬ್ದವನ್ನು ತಯಾರು ಮಾಡಿಕೊಂಡಿದ್ದೇನೆ.

5. ನಾನು ಕರ್ಮ ಯೋಗಿಯಾಗಿ ಪ್ರತಿ ಕರ್ಮದಲ್ಲಿ ತಂದೆಯ ಸಹಾಯದಿಂದ ಉತ್ಸಾಹ ಉಲ್ಲಾಸಗಳನ್ನು, ಧೈರ್ಯವನ್ನು, ಅವಿಶ್ರಾಂತತೆಯ ಸ್ಥಿತಿಯನ್ನು ಅನುಭವ ಮಾಡಿಕೊಂಡು ಸಫಲತೆಯನ್ನು ಪಡೆದಿದ್ದೇನೆ.

6. ನಾನು ಪರಮಾತ್ಮನ ಧೈರ್ಯ ಮತ್ತು ಸಹಾಯದಿಂದ ಧೈರ್ಯವನ್ನು ಪಡೆದು ನಥಿಂಗ್ ನ್ಯೂ, ವಿಜಯವಂತೂ ಲಬಿಸಿಯೇ ಇದೆ, ಎಂಬ ಸಂಕಲ್ಪದಿಂದ ಸತ್ಯವಾದ ಪ್ರೀತಿಯ ಅನುಭವವನ್ನು ಪಡೆದಿದ್ದೇನೆ.

7. ನಾನು ಸಹಜ ಯೋಗಿಯಾಗಿ ಸದಾ ಯೋಗಿಯಾಗಿ ಇರುತ್ತಾ ಪ್ರೀತಿಯ ಪ್ರತ್ಯಕ್ಷ ಪ್ರಮಾಣವನ್ನು ಕೊಟ್ಟಿದ್ದೇನೆ.

8. ಶಕ್ತಿ&ಸ್ನೇಹ, ಅತಿತ&ಅತಿಪ್ರಿಯ , ಕರ್ಮ ಮಾಡುತ್ತಲೆ ಅತೀತವಾಗಿ ಮತ್ತು ಭಿನ್ನವಾಗಿ ಕುಳಿತುಕೊಳ್ಳುವ ಸ್ಥಿತಿಯಲ್ಲೂ ಎಲ್ಲದಕ್ಕಿಂತಲೂ ಸಮಾನತೆ ಎಂಬ ಕಲೆಯಲ್ಲಿ ನಂಬರನ್ನು ಪಡೆದು ಮಹಾನ್ ಆಗಿದ್ದೇನೆ.

9. ನಾನು ಇಲ್ಲಿ ಸಹಜ ಪುರುಷಾರ್ಥವನ್ನು ಮಾಡಿ ಅಲ್ಲಿ ಸಹಜ ಪ್ರಾಲಬ್ಧ ಪಡೆದಿದ್ದೇನೆ.